## 38 ಲಕ್ಷ ರೂ. ಮೌಲ್ಯದ ವೈದ್ಯಕೀಯ ಉಪಕರಣ ಹಸ್ತಾಂತರ | ಗರ್ಭಿಣಿ-ನವಜಾತ ಶಿಶುಗಳ ಆರೈಕೆಗೆ ಸಹಕಾರಿ

# ದಾನಿಗಳ ನೆರವಿನಿಂದ ಕಿಮ್ಸ್‌ನಲ್ಲಿ ಉತ್ತಮ ಸೇವೆ

**ಹುಬ್ಬಳ್ಳಿ:** ಎಡಿಎಂ ಆಗ್ರೋ ಇಂಡಸ್ಟ್ರೀಸ್ ಇಂಡಿಯಾ ಕಂಪನಿ ದೇಶಪಾಂಡೆ ಫೌಂಡೇಶನ್ ಸಹಯೋಗದಲ್ಲಿ ನಗರದ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್)ಗೆ ಅಂದಾಜು 38 ಲಕ್ಷ ರೂ. ಮೌಲ್ಯದ ವೈದ್ಯಕೀಯ ಉಪಕರಣಗಳನ್ನು ಶುಕ್ರವಾರ ಕಿಮ್ಸ್ ಆಸ್ಪತ್ರೆಗೆ ಹಸ್ತಾಂತರಿಸಿತು.

ಕಿಮ್ಸ್‌ನ ಆಡಳಿತ ಮಂಡಳಿ ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹು-ಧಾ ಮಹಾನಗರ ಪಾಲಿಕೆ ಆಯುಕ್ತ ಡಾ| ಬಿ.ಗೋಪಾಲಕೃಷ್ಣ ಅವರು ಉಪಕರಣಗಳನ್ನುಕಿಮ್ಸ್‌ಗೆಹಸ್ತಾಂತರಿಸಿ ಮಾತನಾಡಿ, ದೇಶಪಾಂಡೆ ಫೌಂಡೇಶನ್ ಸಾರ್ವಜನಿಕ ಸೇವೆಯಲ್ಲಿ ಸದಾಕಾಲ ಮುಂದಿದೆ. ಕೋವಿಡ್‌ನ ಎರಡು ಅಲೆಗಳಲ್ಲಿ ಕಿಮ್ಸ್ ಆಸ್ಪತ್ರೆಗೆ ಹಲವಾರು ವೈದ್ಯಕೀಯ ಉಪಕರಣ, ಸಾಮಗ್ರಿಗಳನ್ನು ನೀಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟಿದೆ. ಅದರಂತೆ ಕೋವಿಡ್ ಮೂರನೇ ಅಲೆಯ ಸಂದರ್ಭದಲ್ಲಿ ಎಡಿಎಂ ಕಂಪನಿ ಸಹಯೋಗದೊಂದಿಗೆ ಕೋವಿಡ್ ರೋಗಿಗಳ ಸಹಾಯಕ್ಕೆ ಅರಿವಳಿಕೆ ಯಂತ್ರ, ನಿಯೋ ನಾಥಲ್ ವಾರಮರ್ಸ್ ಹಾಗೂ ಬ್ರೋಬ್ಸ್ ಉಪಕರಣಗಳನ್ನು ನೀಡಿದೆ. ಇವು ಗರ್ಭಿಣಿ ಮತ್ತು ನವಜಾತ ಶಿಶುಗಳ ಆರೈಕೆ ಮತ್ತು ಉತ್ತಮ ಚಿಕಿತ್ಸೆಗೆ ಉಪಯುಕ್ತವಾಗಿವೆ ಎಂದರು.



**ಹುಬ್ಬಳ್ಳಿ: ಎಡಿಎಂ ಇಂಡಸ್ಟ್ರೀಸ್ ಇಂಡಿಯಾ ಕಂಪನಿಯು ದೇಶಪಾಂಡೆ ಫೌಂಡೇಶನ್ ಸಹಯೋಗದಲ್ಲಿ ಕಿಮ್ಸ್ ಆಸ್ಪತ್ರೆಗೆ ಕೊಡಮಾಡಿದ ವೈದ್ಯಕೀಯ ಉಪಕರಣಗಳನ್ನು ಪಾಲಿಕೆ ಆಯುಕ್ತ ಡಾ| ಬಿ. ಗೋಪಾಲಕೃಷ್ಣ ಅವರು ಪಿಪಿಟಿ ಮೂಲಕ ಕಿಮ್ಸ್‌ಗೆ ಹಸ್ತಾಂತರಿಸಿದರು.**

ಕಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ| ಅರುಣಕುಮಾರ ಸಿ. ಮಾತನಾಡಿ, ದೇಶಪಾಂಡೆ ಫೌಂಡೇಶನ್ ಮತ್ತು ಎಡಿಎಂ ಕಂಪನಿ ಕಿಮ್ಸ್ ಆಸ್ಪತ್ರೆಗೆ ಆಧುನಿಕ ತಂತ್ರಜ್ಞಾನ ಉಪಕರಣಗಳನ್ನು ನೀಡಿದ್ದು, ಇವುಗಳು ಕೋವಿಡ್ ಸೋಂಕಿತರು ಹಾಗೂ ನವಜಾತ ಶಿಶುಗಳಿಗೆ ಅನುಕೂಲವಾಗಲಿವೆ. ಆ ಮೂಲಕ ಉತ್ತರ ಕರ್ನಾಟಕದ ಸಂಜೀವಿನಿ ಎನಿಸಿಕೊಂಡಿರುವ ಕಿಮ್ಸ್‌ಗೆ ಎನ್‌ಜಿಒಗಳು ಸಹಾಯ ಮಾಡುತ್ತಿದ್ದು ರೋಗಿಗಳಿಗೆ ಮತ್ತಷ್ಟು ಸೇವೆ ನೀಡಲು ಸಹಕಾರಿಯಾಗಿದೆ ಎಂದು ಹೇಳಿದರು.

ಎಡಿಎಂ ಕಂಪನಿಯ ಟೆಕ್ನಿಕಲ್ ಪ್ಲಾಂಟ್‌ನ ಮುಖ್ಯಸ್ಥ ಹೇಮಂತಕುಮಾರ ಸಾರಸ್ವತ ಮಾತನಾಡಿ, ಬಡವರು ಚಿಕಿತ್ಸಾ ವೆಚ್ಚ ಹೆಚ್ಚಾಗುತ್ತದೆ ಎಂಬ ಆತಂಕದಲ್ಲಿ ದೊಡ್ಡ ಆಸ್ಪತ್ರೆಗಳಿಗೆ ಹೋಗಲು ಹಿಂದೇಟು ಹಾಕುತ್ತಾರೆ. ಬಡ ರೋಗಿಗಳ ಸಂಜೀವಿನಿ ಆಸ್ಪತ್ರೆಯಾದ ಕಿಮ್ಸ್ ಆಸ್ಪತ್ರೆಗೆ ಮುಂದಿನ ದಿನಗಳಲ್ಲಿ ಕಂಪನಿಯಿಂದ ಇನ್ನಷ್ಟು ಸಹಕಾರ ನೀಡಲಾಗುವುದು ಎಂದರು.

ಎಡಿಎಂ ಕಂಪನಿಯ ವಾಣಿಜ್ಯ ಉಪ ವ್ಯವಸ್ಥಾಪಕ ಶಶಾಂಕ ರೆಡ್ಡಿ, ಎಚ್‌ಆರ್ ವ್ಯವಸ್ಥಾಪಕ ಅನಿಲಕುಮಾರ ತೆರದಾಳ, ಕಿಮ್ಸ್‌ನ ಸರ್ಜರಿ ವಿಭಾಗದ ಯುನಿಟ್ ಮುಖ್ಯಸ್ಥ ಡಾ| ನಾರಾಯಣ ಹೆಬಸೂರ, ಸಿಇಒ ರಾಜಶ್ರೀ ಜೈನಾಪುರ, ಡಾ| ಎಸ್. ವೈ. ಮುಲ್ಕಿಪಾಟೀಲ, ಡಾ| ಲಕ್ಷ್ಮೀಕಾಂತ ಲೋಕರೆ, ಮಕ್ಕಳ ತಜ್ಞ ಡಾ| ಮಾರ್ತಾಂಡಪ್ಪ, ದೇಶಪಾಂಡೆ ಫೌಂಡೇಶನ್ ಸಿಇಒ ವಿವೇಕ ಪವಾರ, ಸಿಒಒ ಸುನಿಲ ಕೆ.ಸಿ., ಹಿರಿಯ ನಿರ್ದೇಶಕ ವಿಜಯ ಪುರೋಹಿತ, ಪ್ರಸನ್ನ, ಹೇಮಾ ಮೊದಲಾದವರಿದ್ದರು.